ಪಿ.ಡಬ್ಲ್ಯೂ : 1

ದಿನಾಂಕ 04-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ. ಬಿ.ಆರ್ ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

| | |
|---|---|
| ನಿಪಿ-1 | ಈ ಕೇಸಿನಲ್ಲಿ ಸಾಕ್ಷಿಗೆ ನುಡಿಯಲು ನೀಡಿರುವ ಅಧಿಕಾರ ಪತ್ರ |
| ನಿಪಿ-2 | ಫಾರಂ ನಂಬ್ರ-7 ರ ದೃಢಿಕೃತ ನಕಲು, |
| ನಿಪಿ-3 | ಭೂ ನ್ಯಾಯ ಮಂಡಳಿ ಆದೇಶದ ದೃಢಿಕೃತ ನಕಲು, |
| ನಿಪಿ-4 | ನಮೂನೆ-10 ರ ದೃಢಿಕೃತ ನಕಲು, |
| | ದಿನಾಂಕಃ 12-11-1999 ರ ವಿಭಾಗ ಪತ್ರದ ದೃಢಿಕೃತ ನಕಲು, ದಿನಾಂಕ 15-11-1999 ರ ಶೇಷಿ ಪೂಜಾರ್ತಿ ಉದಯ ಪೂಜಾರಿ ಪರ 2 ಕ್ರಯ ಪತ್ರಗಳ ದೃಢೀಕೃತ ನಕಲು, ದಿನಾಂಕ 17-11-1999 ರ ಕ್ರಯ ಪತ್ರದ ದೃಢೀಕೃತ ನಕಲು, ದಿನಾಂಕ 09-02-2001 ರ ವಿಭಾಗ ಪತ್ರದ ದೃಢೀಕೃತ ನಕಲು, ದಿನಾಂಕ 16-11-2002 ರ ಕ್ರಯ ಪತ್ರದ ದೃಢೀಕೃತ ನಕಲು, ದಿನಾಂಕ 10-11-2012 ರ ವಿಭಾಗ ಪತ್ರದ ದೃಢೀಕೃತ ನಕಲು, ದಿನಾಂಕ 01-09-2006 ಕ್ರಯ ಪತ್ರದ ದೃಢೀಕೃತ ನಕಲು, ದಿನಾಂಕ 28-10-2016 ರ ಕ್ರಯ ಪತ್ರದ ದೃಢೀಕೃತ ನಕಲು, 26-05-2011 ಮತ್ತು 13-07-2015 ರ ಕ್ರಯಪತ್ರಗಳನ್ನು ಗುರುತಿಸಲು ತಕರಾರು ಇದೆ, ಕಾರಣ ಸದ್ರಿ ದಾಖಲೆಗಳು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ಪ್ರತಿವಾದಿ 1 ರಿಂದ 6, 10, 26 ಮತ್ತು 79 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎಸ್.ಎ ರವರು ತಕರಾರು ಸಲ್ಲಿಸಿದ್ದು, ವಾದಿ ಪರ ವಕೀಲರಾದ ಶ್ರೀ ಕೆ.ಬಿ.ಆರ್ ರವರು ಎಲ್ಲಾ ದಾಖಲೆಗಳ ಮೂಲ ದಾಖಲೆಗಳು ತಕರಾರು ಎತ್ತಿರುವ ಪ್ರತಿವಾದಿಗಳ ಬಳಿಯೇ ಇದ್ದು, ವಾದಿಯನ್ನು ಪಕ್ಷಗಾರರನ್ನಾಗಿ ಮಾಡದೇ ವಿಭಾಗ ಮಾಡಿಕೊಂಡು ಮಾರಾಟ ಮಾಡಿದ್ದು ಎಲ್ಲಾ ದಾಖಲೆಗಳು ಅವರಿಗೆ ಸಂಬಂದಿಸಿದ್ದು, ಎಲ್ಲಾ ದಾಖಲೆಗಳು ದೃಢೀಕೃತ ದಾಖಲೆಗಳಾಗಿದ್ದು, ನಿಶಾನೆಯಾಗಿ ಗುರುತಿಸಬಹುದು ಎಂದು ನುಡಿದಿರುತ್ತಾರೆ.<br><br>ಮಾನ್ಯ ಉಭಯ ವಕೀಲರುಗಳ ವಾದ ವಿವಾದ ಆಲಿಸಲಾಯಿತು. ದಾವೆ ವಾದಿ ಭಾಗಾಂಶ ಹಾಗೂ ತನ್ನನ್ನು ಪಕ್ಷಗಾರರನ್ನಾಗಿ ಮಾಡದೇ ರದ್ದು ಗೊಳಿಸಬೇಕೆಂದು ಮತ್ತು ಸದರಿ ದಾಖಲೆಗಳು ತನ್ನನ್ನು ಬಾದ್ಯ ಮಾಡುವುದಿಲ್ಲ ಎಂದು ಕೋರಿ ಸಲಿಸಿದ್ದು, ವಾದಿ ಸದರಿ ದಾಖಲೆಗಳಿಗೆ ಬಾದ್ಯಸ್ಥನಾ, ಅಲ್ಲವಾ, ಭಾಗಾಂಶ ಪಡೆಯಲು ಹಕ್ಕುಳ್ಳವಳಾ ಎಂಬ ಪ್ರಶ್ನೆ |

| | |
|---|---|
| | ನ್ಯಾಯಾಲಯದ ಮುಂದೆ ಇದ್ದು, ಈ ಹಂತದಲ್ಲಿ ವಿವಾದಾಂಶ ಸಹ ರಚಿಸಿ, ಉಭಯ ಪಕ್ಷಗಾರರರಿಗೂ ಸದರಿ ವಿವಾದಾಂಶಗಳನ್ನು ಸಾಬೀತು ಪಡಿಸುವ ಜಾವಾಬ್ದಾರಿಯನ್ನು ನ್ಯಾಯಾಲಯ ಹೊರಿಸಿದ್ದು, ಈ ಹಂತದಲ್ಲಿ ವಾದಿ ವಾದಾಂಶವನ್ನು ಸಾಬೀತುಪಡಿಸಲು ದಾಖಲೆಯನ್ನು ಗುರುತಿಸಿಕೊಳ್ಳಲು ಹಾಜರುಮಾಡಿದ್ದು, ದಾಖಲೆಯನ್ನು ಗುರುತಿಸಿಕೊಳ್ಳಲು ಅನುಮತಿ ನೀಡಿದ್ದು, ಸದರಿ ದಾಖಲೆ ಭಾರತ ಸಾಕ್ಷ್ಯ ಅಧಿನಿಯಮದರಿ 2 ನೇ ಸಾಕ್ಷ್ಯವಾಗಿ ಪರಿಗಣಿಸಬಹುದು, ಅಲ್ಲದೇ ತಾನು ಪಕ್ಷಗಾರ ಎಂದೂ, ಆ ಎಲ್ಲಾ ದಾಖಲೆಗಳು ಪ್ರತಿವಾದಿ ಕಬ್ಜೆಯಲ್ಲೇ ಇದೆ ಎಂದೂ, ಅಲ್ಲದೇ ದಾಖಲೆಗಳು ದೃಢೀಕೃತ ದಾಖಲೆಗಳು, 2 ನೇ ಸಾಕ್ಷ್ಯವಾಗಿ ನ್ಯಾಯಾಲಯ ಪರಿಗಣಿಸಬೇಕು ಎಂದು ಸಾಕ್ಷ್ಯ ಅಧಿನಿಯಮ ಸ್ಪಷ್ಟೀಕರಿಸಿರುವ ಕಾರಣ ಮತ್ತು ಪಾಟೀ ಸವಾಲಿಗೆ ಅವಕಾಶ ಸಹ ಪ್ರತಿವಾದಿಗೆ ಇದ್ದು ತಕರಾರು ತಿಳ್ಳಿ ಹಾಕಿ ನಿಶಾನೆಯಾಗಿ ಗುರುತಿಸಬಹುದು ಎಂದು ನ್ಯಾಯಾಲಯಕ್ಕೆ ಕಂಡು ಬಂದಿದ್ದು, ಗುರುತಿಸಲಾಗಿದೆ. |
| ನಿಪಿ 5 | ದಿನಾಂಕ 12-11-1999 ರ ವಿಭಾಗ ಪತ್ರದ ದೃಢಿಕೃತ ನಕಲು, |
| ನಿಪಿ-6 | ದಿನಾಂಕಃ15-11-1999 ರ ಕ್ರಯ ಪತ್ರದ ದೃಢಿಕೃತ ನಕಲು, |
| ನಿಪಿ-7 | ದಿನಾಂಕಃ 15-11-1999 ರ ವ್ಯವಸ್ಥಾ ಪತ್ರದ ದೃಢಿಕೃತ ನಕಲು, |
| ನಿಪಿ-8 | ದಿನಾಂಕಃ17-11-1999 ರ ಕ್ರಯಪತ್ರದ ದೃಢಿಕೃತ ನಕಲು, |
| ನಿಪಿ-9 | ದಿನಾಂಕಃ09-02-2001 ರ ವಿಭಾಗ ಪತ್ರದ ದೃಢಿಕೃತ ನಕಲು, |
| ನಿಪಿ-10 | ದಿನಾಂಕಃ16-11-2002 ರ ಕ್ರಯಪತ್ರದ ದೃಢಿಕೃತ ನಕಲು, |
| ನಿಪಿ-11 | ದಿನಾಂಕಃ10-11-2012 ರ ವಿಬಾಗ ಪತ್ರದ ದೃಢಿಕೃತ ನಕಲು, |
| ನಿಪಿ-12 | ದಿನಾಂಕಃ01-09-2006 ರ ಕ್ರಯಪತ್ರದ ದೃಢಿಕೃತ ನಕಲು, |
| ನಿಪಿ-13 | ದಿನಾಂಕಃ28-10-2016 ರ ಕ್ರಯ ಪತ್ರದ ದೃಢಿಕೃತ ನಕಲು, |
| | ದಿನಾಂಕ 26-10-2016 ರ ಒಪ್ಪಿಗೆ ಪತ್ರ ಹಾಜರು ಮಾಡಿದ್ದು, ಸದ್ರಿ ದಾಖಲೆ ನಿಶಾನೆಯಾಗಿ ಗುರುತಿಸಬಹುದು, ಕಾರಣ ಮೂಲ ದಾಖಲೆ ಎಂದು ವಕೀಲರು ನುಡಿದಿದ್ದು, ಸದರಿ ದಾಖಲೆ ಪರಿಶೀಲಿಸಲಾಗಿ ಒಪ್ಪಿಗೆ ಪತ್ರ ಬರೆದುಕೊಟ್ಟವರಾಗಲಿ, ಬರೆಯಿಸಿಕೊಂಡವರಾಗಲಿ, ಸಾಕ್ಷಿದಾರರುಗಳಾಗಿ ಯಾವುದೇ ಸಹಿ ಮಾಡಿಲ್ಲ ಮತ್ತು ಸಂಪೂರ್ಣ ದಾಖಲೆ ಯಾರೂ ಸಹಿ ಮಾಡದೇ ಖಾಲಿ ಇದ್ದು ಪರಿಗಣಿಸಬಾರದಾಗಿ ನ್ಯಾಯಾಲಯ ತೀರ್ಮಾನ ಮಾಡಿ ಗುರುತಿಸಿರುವುದಿಲ್ಲ. |
| ನಿಪಿ 14 | ದಿನಾಂಕಃ26-05-2011 ರ ಕ್ರಯ ಪತ್ರದ ದೃಢಿಕೃತ ನಕಲು, |

| | |
|---|---|
| ನಿಪಿ 15 | ದಿನಾಂಕಃ13-07-2015 ರ ಕ್ರಯದ ಪತ್ರದ ದೃಢಿಕೃತ ನಕಲು, |
| ನಿಪಿ 16 | ದಿನಾಂಕಃ28-12-2015 ರ ನೋಟೀಸಿನ ಕಛೇರಿ ನಕಲು, |
| ನಿಪಿ-17 ರಿಂದ 25 | 1, 2, 4, 6, 8, 9, 11 ರಿಂದ 13 ನೇ ಪ್ರತಿವಾದಿಗಳಿಗೆ ನೋಟೀ ಜ್ಯಾರಿಯಾದ ಬಗ್ಗೆ 9 ಅಂಚೆ ಸ್ವೀಕೃತಿಗಳು, |
| ನಿಪಿ-26 ರಿಂದ 28 | ಪ್ರತಿವಾದಿ 5, 7 ಮತ್ತು 10 ರವರ ಅಂಚೆ ಲಕೋಟೆ ವಾಪಾಸಾಗಿದ್ದು, ಸದ್ರಿ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿದ್ದು, ನೋಟೀಸಿನ ಮೂಲಪ್ರತಿಯಾಗಿದ್ದು ಅಂಚೆ ಲಕೋಟೆಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.<br>ನೋಟೀಸುಗಳನ್ನು 26(ಎ) ರಿಂದ 28(ಎ) ಎಂದು ಗುರುತಿಸಲಾಯಿತು. |
| ನಿಪಿ 29 | ದಿನಾಂಕಃ18-01-200 ರ ನೋಟೀಸಿನ ಕಛೇರಿ ನಕಲು, |
| ನಿಪಿ-30 ರಿಂದ 46 | 17 ಪಹಣಿ ಪತ್ರಿಕೆ ಗಳು |

**ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಲು ಕೋರಿಕೆ.**

**ಪಾಟೀ ಸವಾಲಿಗೆ ಕಾಲವಕಾಶ** ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ